ಮೂಲೆ ಟೇಬಲನ್ನು ಆರಿಸಿಕೊಂಡು ಗ್ಲಾಸು ಹಿಡಿದು ಕೂತೆ. ಶೆರ್ಲಿ ನನ್ನ ಹತ್ತಿರ ಬಂದು ಕೂತಳು. ಏನೋ ಹೇಳಲು ಬಾಯಿ ತೆಗೆದವಳು ತಲೆಯಲ್ಲಾಡಿಸಿ ಉಗುಳು ನುಂಗಿ ಸುಮ್ಮನಾದಳು. "ಶೆರ್ಲಿ ಏನೋ ಹೇಳಬೇಕಂತ ಇದ್ದಿಯಲ್ಲೇ." "ರಿಷಿಕಾ, ಸಾಕಾಯಿತು ನನಗಿಲ್ಲಿ. ನೀವು ಭಾರತೀಯರು ಎಷ್ಟೊಂದು ಖುಷಿಯಾಗಿ ಇರುತ್ತೀರಿ. ಎಲ್ಲರೂ ಮದುವೆಯಾಗುತ್ತಾರೆ, ಕಷ್ಟ ಸುಖವನ್ನು ಹಂಚಿ ಉಣ್ಣುತ್ತಾರೆ. ಮುದುಕರಾದ ಮೇಲೂ ಎಷ್ಟೊಂದು ಸಂತೋಷವಾಗಿರುತ್ತಾರೆ. ನಾನೂ ಭಾರತಕ್ಕೆ ಬರುತ್ತೇನೆ, ನನಗೊಂದು ಗಂಡನ್ನು ಹುಡುಕಿ ಕೊಡು. ಮದುವೆಯಾಗಿ ಅಲ್ಲೇ ಸೆಟ್ಲ್ ಆಗುತ್ತೇನೆ." ಗಾಬರಿಯಾಯಿತು. "ಅಲ್ವೇ, ನಿನಗೊತ್ತಿಲ್ಲ ಭಾರತೀಯ ಗಂಡಸರು ಶುದ್ಧ ಅಮ್ಮನ ಬಾಲಗಳು, ಸೋಂಬೇರಿಗಳು. ಮನೆ, ಮಕ್ಕಳ ಜವಾಬ್ದಾರಿ ಎಲ್ಲಾ ಹೆಂಗಸರದ್ದೇ" ಎಂದೆ. ಕ್ಲಬ್ಬಿನಲ್ಲಿ ಹಾಡಿನ ಶಬ್ದ ಜಾಸ್ತಿಯಾಯಿತು. ಸರಿಯಾಗಿ ಮಾತು ಕೇಳಿಸದಾಯಿತು. ಕಡೆಯಲ್ಲಿ ಅವಳು ಹೇಳಿದ್ದು ಕೇಳಿಸಿತು, "...ನೊ ಪ್ರಾಬ್ಲಂ, ಸ್ವಲ್ಪ ಅಡ್ಜೆಸ್ಟ್ ಮಾಡಿಕೊಂಡರಾಯಿತು" ಎನ್ನುತ್ತಾ ತನ್ನ ಪುಟ್ಟ ಕಣ್ಣನ್ನು ಹಿಗ್ಗಿಸಿ, ''ನೀನು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದರೆ ಒಂದು ಮಾತು'' ಎಂದವಳು ಮೆಲ್ಲಗೆ, "ನಿನ್ನ ಡೈವೊರ್ಸ್ ಆದಮೇಲೆ ನಿನ್ನ ಗಂಡನನ್ನೇ ಮದುವೆಯಾಗುತ್ತೇನೆ. ನನ್ನ ಫೋಟೊ ಅವನಿಗೆ ತೋರಿಸು. ಕೇಳಿ ನೋಡು, ನಾನು ವರ್ಜಿನ್ ಅಲ್ಲದಿದ್ದರೇನಾಯಿತು, ನಿನ್ನ ಗಂಡನೂ ಅಲ್ಲ ತಾನೇ" ಅವಳು ಮೆಲ್ಲನೆ ಆಡಿದ್ದರೂ ನನಗೆ ಸ್ಪಷ್ಟವಾಗಿ ಕೇಳಿಸಿತು. ತಟ್ಟನೆ ಹೊರಗೋಡಿ ಬಂದೆ.



ಮರುದಿನ ಏರ್‌ಪೋರ್ಟಿಗೆ ಶೆರ್ಲಿ ಕಳುಹಿಸಿಕೊಡಲು ಬಂದಿದ್ದಳು. ಅವಳಿಂದ ತಪ್ಪಿಸಿಕೊಂಡು ಓಡಾಡಿದೆ. ವಾಟ್ಸ್‌ಆ್ಯಪ್‌ನಲ್ಲಿ ಅವಳ ಫೋಟೊ ಕಳಿಸಿದಳು. ಅಲ್ಲದೆ ಮತ್ತೇನೊ ಪ್ರವರ ಬರೆದಿದ್ದಳು. ಇಲ್ಲಿ ಅವಳದ್ದೂ ತಪ್ಪಿಲ್ಲ, ಪಾಪದ ಹುಡುಗಿ ಮದುವೆ, ಮಕ್ಕಳ ಕನಸನ್ನು ಕಾಣುತ್ತಿದ್ದಾಳೆ. ಒಂದು ಸ್ಮೈಲಿ ಎಮೋಜಿಯನ್ನು ಕಳುಹಿಸಿದೆ. ಫ್ಲೈಟಿನಲ್ಲಿ ಕೂತವಳಿಗೆ ಇನ್ನಿಲ್ಲದ ತಳಮಳ. ಆ ಕೆಂಪು ದೇಶದವಳು ಹೇಳಿದ ಮಾತುಗಳು ಮತ್ತೆಮತ್ತೆ ನೆನಪಾಗುತ್ತಿದ್ದವು. ಫ್ಲೈಟು ಬಂಗಾಳ ಕೊಲ್ಲಿಯ ಮೇಲೆ ಹಾರುತ್ತಿತ್ತು. ಇನ್ನೊಂದೆರಡು ಗಂಟೆಗಳಲ್ಲಿ ಬೆಂಗಳೂರು ತಲುಪಲಿತ್ತು. ಮನಸ್ಸು ನನ್ನನ್ನು ಕೇಳದೆ ಒಂದು ನಿರ್ಧಾರ ತೆಗೆದುಕೊಂಡಿತು. ನೋಡಿದರೆ ಇಂಟರ್ನೆಟ್ ಕನೆಕ್ಷನ್ ಸಹ ಇತ್ತು. ಕೂಡಲೇ ನಮ್ಮ ಲಾಯರ್‌ಗೆ ಮೆಸೇಜ್ ಮಾಡಿದೆ: "ಕೋರ್ಟಿಗೆ ಪೇಪರ್ ಸಬ್ ಮಿಟ್ ಮಾಡುವುದು ಬೇಡ." ರಿತಿಕನಿಗೆ, "ನಾನು ಬರುತ್ತಿದ್ದೇನೆ, ಬಿಸಿ ಬಿಸಿ ಕಾಫಿ ಮಾಡಿಕೊಡುತ್ತಿ ತಾನೇ?" ಎಂದು ಮೆಸೇಜ್ ಕೊಟ್ಟೆ. ರಿತಿಕ್ಕನ ಉತ್ತರ ಕೂಡಲೆ ಬಂತು – ಕಾಫಿ, ಬರ್ಗರ್ ಮತ್ತು ಹೃದಯದ ಎಮೋಜಿ. ನಾನೂ ಹೃದಯದ ಎಮೋಜಿ ಕಳುಹಿಸಿದೆ. ತೊಳಲಾಡುತ್ತಿದ್ದ ಮನಸ್ಸಿಗೆ ನೆಮ್ಮದಿ ಸಿಗುತ್ತಿದ್ದಂತೆ ಕಣ್ಣಿಗೆ ನಿದ್ರೆ ಹತ್ತಿತು.


## ಗೀತಾ ಕುಂದಾಪುರ

ಬಾಲ್ಯ ಮತ್ತು ವಿದ್ಯಾಭ್ಯಾಸ ಕರಾವಳಿಯ ಕುಂದಾಪುರದಲ್ಲಿ. ಎಂ.ಕಾಂ. ಪದವೀಧರೆ. ಹಲವು ವರ್ಷಗಳ ಕಾಲ ಗಲ್ಫ್ ದೇಶ ಕತಾರ್‌ನಲ್ಲಿದ್ದರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಕತೆ, ಲೇಖನ, ಲಹರಿ, ಪ್ರಬಂಧ, ಹಾಸ್ಯ ಲೇಖನಗಳು ಮತ್ತು ಪ್ರವಾಸ ಕಥನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಪ್ರಕಟಿತ ಕೃತಿಗಳು: 'ಅಪ್ರಮೇಯ', 'ಚಿತ್ತದಲ್ಲಿ ಮೂಡಿದ ಚಿತ್ತಾರ' (ಕಥಾಸಂಕಲನಗಳು), 'ದ್ವೀಪಗಳತ್ತ ಯಾನ' (ಜಪಾನ್ ಮತ್ತು ಆಸ್ಟ್ರೇಲಿಯಾ ಪ್ರವಾಸ ಕಥನ).